ಈ) ರೂ. 16787.24 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ. ಆ ಸಂಬಂಧದ ವಿವರಗಳನ್ನು ಅನುಬಂಧ–3ರಲ್ಲಿ ನೀಡಲಾಗಿದೆ.

ಕಾನೂನು ಬಾಹಿರ A.N.M. ತರಬೇತಿ ಶಾಲೆ

212 (373) ಡಾ॥ ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ದೇವರಾಜ ಅರಸು ಶಿಕ್ಷಣ ಸಂಸ್ಥೆಯ ವತಿಯಿಂದ ಶ್ರೀ ಲಕ್ಷ್ಮೀ ವೆಂಕಟೇಶ್ವರ ಎ.ಎನ್.ಎಂ. ತರಬೇತಿ ಶಾಲೆ ಪ್ರಾರಂಭಿಸಲು ಯಾವ ದಿನಾಂಕದಂದು ಅನುಮತಿ ನೀಡಲಾಯಿತು.

ಅ) ಈ ಸಂಸ್ಥೆಯವರ ಎ.ಎನ್.ಎಂ. ತರಬೇತಿ ಶಾಲೆ ಪ್ರಾರಂಭಿಸಲು ನೀಡಿದ ಅರ್ಜಿಯ ದಿನಾಂಕ ಯಾವುದು. Indian Nursing Council ರವರು ಮೊದಲ ತಪಾಸಣೆ ವರದಿ ಯಾವ ದಿನಾಂಕದಂದು ನೀಡಿದೆ ; (ವರದಿಯ ಪ್ರತಿ ನೀಡುವುದು)

ಇ) ರಾಜ್ಯ ತಂಡದವರು ಈ ಶಾಲೆಯ ಬಗ್ಗೆ ತಪಾಸಣೆ ಮಾಡಿ ಪ್ರವೇಶಕ್ಕೆ ಅನುಮತಿ ನೀಡಿದ ದಿನಾಂಕ ಯಾವುದು ; (ತಪಾಸಣೆ ವರದಿ ನೀಡುವುದು)

ಈ) ಕಾನೂನುಬಾಹಿರ ಅನುಮತಿ ನೀಡಲು ಆರೋಗ್ಯ ಇಲಾಖೆ ಕಾರ್ಯಾಲಯದಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ಆಪಾದನೆ ನಿಜವೆ ?

ಶ್ರೀ ಅರವಿಂದ ಲಿಂಬಾವಾಳಿ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–

ಅ) ಸರ್ಕಾರದ ಆದೇಶ ಸಂಖ್ಯೆ ಆಕುಕ 10 ಎಫ್‌ಪಿಇ 2011, ದಿನಾಂಕ : 16–04–2012 ರಂದು ಶ್ರೀ ಲಕ್ಷ್ಮಿ ವೆಂಕಟೇಶ್ವರ ಎ.ಎನ್.ಎಂ. ತರಬೇತಿ ಶಾಲೆ ಪ್ರಾರಂಭಿಸಲು ತಾತ್ವಿಕ ಅನುಮತಿ ನೀಡಲಾಗಿದೆ.

ಆ) ಸದರಿ ಸಂಸ್ಥೆಯವರು ಎ.ಎನ್.ಎಂ. ತರಬೇತಿ ಶಾಲೆ ಪ್ರಾರಂಭಿಸಲು ದಿನಾಂಕ : 23–08–2009 ರಂದು ಸರ್ಕಾರಕ್ಕೆ ಅರ್ಜಿ ನೀಡಿರುತ್ತಾರೆ.

ಸದರಿ ಸಂಸ್ಥೆಯವರು ನೀಡಿರುವ ಮಾಹಿತಿಯನ್ವಯ Indian Nursing Council ನವದೆಹಲಿ ಇವರಿಗೆ ತಪಾಸಣೆಗಾಗಿ ಸಂಸ್ಥೆ ಅರ್ಜಿ ಮತ್ತು ಡಿ.ಡಿ. ಸಲ್ಲಿಸಿದೆ.

ಇ) ಸದರಿ ಸಂಸ್ಥೆಯು ಸರ್ಕಾರದ ಷರತ್ತಿನಂತೆ ರೂ. ಒಂದು ಲಕ್ಷಗಳ ನೋಂದಣಿ ಶುಲ್ಕವನ್ನು ಡಿ.ಡಿ. ಮುಖಾಂತರ ದಿನಾಂಕ : 05–05–2012 ರಂದು ನಿರ್ದೇಶನಾಲಯಕ್ಕೆ ಸಲ್ಲಿಸಿದೆ. ಇಲಾಖೆ ವತಿಯಿಂದ ಇದುವರೆಗೆ ತಪಾಸಣೆ ಆಗಿರುವುದಿಲ್ಲ.

ಈ) ಇಲ್ಲ.

ಮಾಗಡಿ ತಾಲ್ಲೂಕಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾರಂಭ

199(558) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮಾಗಡಿ ತಾಲ್ಲೂಕಿನಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವಾಣಿಜ್ಯ ಸಂಯೋಜನೆಯನ್ನು ಪ್ರಾರಂಭಿಸಲು ಪ್ರಸ್ತಾವನೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಅ) ಬಂದಿದ್ದಲ್ಲಿ, ಮಾಗಡಿ ತಾಲ್ಲೂಕಿನ ಯಾವ್ಯಾವ ಕಾಲೇಜುಗಳಲ್ಲಿ ವಾಣಿಜ್ಯ ಸಂಯೋಜನೆಯನ್ನು ಪ್ರಾರಂಭಿಸಲು ಪ್ರಸ್ತಾವನೆ ಬಂದಿರುತ್ತದೆ ;

ಇ) ಯಾವ್ಯಾವ ಕಾಲೇಜುಗಳಲ್ಲಿ ಈ ಸಾಲಿನಿಂದ ಪ್ರಾರಂಭಿಸಲಾಗಿದೆ ; ಉಳಿದ ಕಾಲೇಜುಗಳಲ್ಲಿ ಯಾವ ಸಾಲಿನಿಂದ ಪ್ರಾರಂಭಿಸಲಾಗುವುದು ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

ಅ) ಹೌದು.

ಆ) ಮಾಗಡಿ ತಾಲ್ಲೂಕಿನ ಈ ಕೆಳಕಂಡ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವಾಣಿಜ್ಯ ಸಂಯೋಜನೆಯನ್ನು ಪ್ರಾರಂಭಿಸಲು ಪ್ರಸ್ತಾವನೆ ಬಂದಿರುತ್ತದೆ.

1. ಸರ್ಕಾರಿ ಪದವಿ ಪೂರ್ವ ಕಾಲೇಜು, ಮಂಚನಬೆಲೆ, ಮಾಡಬಾಳ್ ಹೋಬಳಿ, ಮಾಗಡಿ ತಾಲ್ಲೂಕು.

2. ಸರ್ಕಾರಿ ಪದವಿ ಪೂರ್ವ ಕಾಲೇಜು, ಮರೂರು ಹ್ಯಾಂಡ್ ಪೋಸ್ಟ್, ಮಾಗಡಿ ತಾಲ್ಲೂಕು.

3. ಸರ್ಕಾರಿ ಪದವಿ ಪೂರ್ವ ಕಾಲೇಜು, ತಿಪ್ಪಸಂದ್ರ, ಮಾಗಡಿ ತಾಲ್ಲೂಕು.

4. ಸರ್ಕಾರಿ ಪದವಿ ಪೂರ್ವ ಕಾಲೇಜು, ಅಗಲಕೋಟೆ ಹ್ಯಾಂಡ್ ಪೋಸ್ಟ್, ಮಾಗಡಿ ತಾಲ್ಲೂಕು.

ಇ) ಪ್ರಸ್ತುತ ಶೈಕ್ಷಣಿಕ ಸಾಲಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು, ಅಗಲಕೋಟೆ ಹ್ಯಾಂಡ್ ಪೋಸ್ಟ್, ಮಾಗಡಿ ತಾಲ್ಲೂಕು ಇಲ್ಲಿ ವಾಣಿಜ್ಯ ಸಂಯೋಜನೆಯನ್ನು ಪ್ರಾರಂಭಿಸಲಾಗಿದೆ.